**ಎಸ್.ಸಿ. 36/2014**

**ದೋ.ಸಾ. : 57 ಫ್ರಾ.ಸಾ. :44**

ಸಾಕ್ಷಿಯ ಹೆಸರು : ಅರುಣ್ ಕುಮಾರ್ ಕೊಳೂರ

**ದಿನಾಂಕಃ 26-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

11. ಮೃತ ವೇಲುವಿನ ಮರಣೋತ್ತರ ಪರೀಕ್ಷಾ ಕಾಲಕ್ಕೆ ಆತನ ಮೈಮೇಲಿದ್ದ ಬಟ್ಟೆಗಳನ್ನು ವೈದ್ಯರು ಸಂಗ್ರಹಿಸಿದ್ದು, ಅವುಗಳನ್ನು ಚಾಸಾ-48 ರವರು ಅದೇ ದಿನ ತಂದು ಹಾಜರುಪಡಿಸಿದ್ದು, ಅವುಗಳನ್ನು ಜಪ್ತುಪಡಿಸಿಕೊಳ್ಳುವ ಸಲುವಾಗಿ ಚಾಸಾ-16 ಮತ್ತು 17 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಅವರ ಸಮಕ್ಷಮ ಸದರಿ ಬಟ್ಟೆಗಳನ್ನು ಪರಿಶೀಲಿಸಲಾಗಿ, ಒಂದು ಕಂದು ಮತ್ತು ಬಿಳಿ ಬಣ್ಣದ ಚೆಕ್ಸ್ ಡಿಸೈಯುಳ್ಳ ತುಂಬು ತೋಳಿನ ಶರ್ಟ್ ಮತ್ತು ಹಳದಿ ಅಂಚಿನ ಬಿಳಿ ಬಣ್ಣದ ಲುಂಗಿ, ಹಸಿರು ಬಣ್ಣದ ಚಡ್ಡಿ ಇದ್ದು, ಅವುಗಳಿಗೆ ರಕ್ತ ತಾಗಿರುತ್ತದೆ. ಸದರಿ ಬಟ್ಟೆಗಳನ್ನು ಪ್ರತ್ಯೇಕವಾಗಿ ಪೇಪರಿನಲ್ಲಿ ಸುತ್ತಿ, ಅವುಗಳನ್ನು ಬಟ್ಟೆಯ ಚೀಲದಲ್ಲಿ ಹಾಕಿ, 'M' ಅಕ್ಷರದ ಮೊಹರು ಮಾಡಿ, ಅವುಗಳ ಮೇಲೆ ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ ಹಾಗೂ ಅವುಗಳ ಮೇಲೆ 5E1, 5E2, 5E3 ಎಂದು ಗುರುತಿಸಿ, ಜಪ್ತುಪಡಿಸಿಕೊಂಡಿರುತ್ತೇನೆ. ಶರ್ಟ್, ಲುಂಗಿ ಹಾಗೂ ಚಡ್ಡಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಎಂ.ಓ-19, 20 ಮತ್ತು 21 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-19(ಬಿ), 20(ಬಿ) ಮತ್ತು 21(ಬಿ) ಎಂದು ಗುರುತಿಸಲಾಯಿತು. ಸದರಿ ಬಟ್ಟೆಗಳನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ಜರುಗಿಸಿದ ಪಂಚನಾಮೆಯನ್ನು ಈಗಾಗಲೇ ನಿಪಿ-22 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-22(ಸಿ) ಎಂದು ಗುರುತಿಸಲಾಯಿತು.

12. ಅದೇ ದಿನ ಚಾಸಾ-56 ರವರು ಮೃತ ವೇಲುವಿನ ಮನೆಯನ್ನು ಪರಿಶೀಲನೆ ಮಾಡಿ, ಪಂಚನಾಮೆಯ ಮೂಲಕ ಎರಡು ಸಿಮ್ ಕಾರ್ಡ್ ಇರುವ ಒಂದು ನೋಕಿಯಾ ಮೊಬೈಲ್, ಸಿಮ್ ಕಾರ್ಡ್ ಇಲ್ಲದೇ ಇರುವ ಎರಡು ನೋಕಿಯಾ ಮೊಬೈಲ್ ಮತ್ತು ಒಂದು G five ಮೊಬೈಲ್ ಇವುಗಳನ್ನು ಪಂಚನಾಮೆಯೊಂದಿಗೆ ಹಾಜರುಪಡಿಸಿದ್ದು, ಸದರಿ ಜಪ್ತುಪಡಿಸಿದ

ಮೊಬೈಲುಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಜಪ್ತುಪಡಿಸಿಕೊಂಡ ನಾಲ್ಕು ಮೊಬೈಲುಗಳಿಗೆ 2B1, 2B2, 2B3 ಮತ್ತು 2B4 ಎಂದು ಗುರುತಿಸಿರುತ್ತಾರೆ. ನೋಕಿಯಾ ಮೊಬೈಲಿನಲ್ಲಿದ್ದ ಎರಡು ಸಿಮ್ ಕಾರ್ಡಿನ ನಂ.8088781823 ಮತ್ತು 9481061419 ಆಗಿರುತ್ತವೆ. ಅದೇ ದಿನ ಎಸ್.ಪಿ. ಕಾರವಾರ ರವರಿಗೆ ಸದರಿ ಮೊಬೈಲುಗಳ ನಂಬರುಗಳ ಸಿ.ಡಿ.ಆರ್. ನ್ನು ಒದಗಿಸುವಂತೆ ಈ-ಮೇಲ್ ಮೂಲಕ ಕೋರಿಕೊಂಡಿರುತ್ತೇನೆ. ಅದೇ ದಿನ ಡಿ.ಎಸ್.ಪಿ., ಕಾರವಾರ ರವರಿಗೆ ಚಾಸಾ-45 ರವರನ್ನು ತನಿಖೆಗೆ ಸಹಾಯಕನಾಗಿ ಕಳುಹಿಸಿಕೊಡುವಂತೆ ಕೋರಿಕೊಂಡಿರುತ್ತೇನೆ. ಆನಂತರ ಗೋವಾದ ಬಾಂಬೋಲಿನ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಗಾಯಾಳು ಚಾಸಾ-22 ಜಾನಕಿಯ ವಿಚಾರಣೆ ಮಾಡಿಕೊಂಡು ಬರುವಂತೆ ಚಾಸಾ-45, 52 ಮತ್ತು 21 ರವರನ್ನು ಕಳುಹಿಸಿರುತ್ತೇನೆ. ಅದೇ ದಿನ ಚಾಸಾ-45, 52 ಮತ್ತು 21 ರವರು ಗಾಯಾಳು ಜಾನಕಿಯನ್ನು ವಿಚಾರಣೆ ಮಾಡಿದ ಬಗ್ಗೆ ನನ್ನ ಬಳಿ ಹೇಳಿಕೆಯನ್ನು ನೀಡಿರುತ್ತಾರೆ.

13. ಅದೇ ದಿನ ಮೃತದೇಹದ ಬೆಂಗಾವಲಿಗಿದ್ದ ಚಾಸಾ-47, 48 ಮತ್ತು 49 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಮೃತ ದೇಹಗಳನ್ನು ಘಟನಾ ಸ್ಥಳದಿಂದ ಸರಕಾರಿ ಆಸ್ಪತ್ರೆಗೆ ಸಾಗಿಸಿದ ವಾಹನದ ಚಾಲಕನಾದ ಚಾಸಾ-33 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-14 ರವರು ಠಾಣೆಗೆ ಬಂದು ಘಟನೆಯ ಬಗ್ಗೆ ಹೇಳಿಕೆ ನೀಡಿರುತ್ತಾರೆ. ಆನಂತರ ನಾನು ಆರೋಪಿಯ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಕ ಮಾಡಿ ಕಳುಹಿಸಿರುತ್ತೇನೆ. ನಾನೂ ಸಹ ಆರೋಪಿಯ ಪತ್ತೆಗಾಗಿ ಹೋಗಿರುತ್ತೇನೆ. ಗಾಯಾಳು ಚಾಸಾ-22 ಜಾನಕಿಯ ಬಟ್ಟೆಗಳನ್ನು ಆಕೆಯ ಚಿಕಿತ್ಸೆಯ ಕಾಲಕ್ಕೆ ಬಾಂಬೋಲಿನ್ ಆಸ್ಪತ್ರೆಯ ವೈದರು ಸಂಗ್ರಹಿಸಿದ್ದು, ಅವುಗಳನ್ನು ಚಾಸಾ-50 ರವರು ದಿ.16-02-2014 ರಂದು ತಂದು ಹಾಜರುಪಡಿಸಿದ್ದು, ಅವುಗಳನ್ನು ಜಪ್ತುಪಡಿಸಿಕೊಳ್ಳುವ ಸಲುವಾಗಿ ಚಾಸಾ-18 ಮತ್ತು 19 ರವರನ್ನು ಪಂಚರಾಗಿ ಬರಮಾಡಿಕೊಂಡು, ಅವರ ಸಮಕ್ಷಮ ಸದರಿ ಬಟ್ಟೆಗಳನ್ನು ಪರಿಶೀಲಿಸಲಾಗಿ, ತಿಳಿ ಹಸಿರು ಬಣ್ಣದ ಸ್ವೆಟರ್, ನೀಲಿ ಬಾರ್ಡರ್ ಇರುವ ಗುಲಾಬಿ ಬಣ್ಣದ ಹೂವಿನ ಡಿಸೈನ್ ಇರುವ ಸೀರೆ, ಹಳದಿ ಬಣ್ಣದ ಲಂಗ, ನೀಲಿ ಬಣ್ಣದ ಬ್ಲೌಸ್ ಇದ್ದು, ಅವುಗಳಿಗೆ ರಕ್ತ ತಾಗಿರುತ್ತದೆ. ಸದರಿ ಬಟ್ಟೆಗಳನ್ನು ಪ್ರತ್ಯೇಕವಾಗಿ ಪೇಪರಿನಲ್ಲಿ ಸುತ್ತಿ, ಅವುಗಳನ್ನು ಬಟ್ಟೆಯ ಚೀಲದಲ್ಲಿ ಹಾಕಿ, 'M' ಅಕ್ಷರದ ಮೊಹರು ಮಾಡಿ, ಅವುಗಳ ಮೇಲೆ ನಾನು ಮತ್ತು ಪಂಚರು

ಸಹಿ ಮಾಡಿರುತ್ತೇವೆ ಹಾಗೂ ಅವುಗಳ ಮೇಲೆ 6F1, 6F2, 6F3 ಮತ್ತು 6F4 ಎಂದು ಗುರುತಿಸಿ, ಜಪ್ತುಪಡಿಸಿಕೊಂಡಿರುತ್ತೇನೆ. ಸ್ವೆಟರ್, ಸೀರೆ, ಲಂಗ ಮತ್ತು ಬ್ಲೌಸ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಎಂ.ಓ–30 ರಿಂದ 33 ಎಂದು ಗುರುತಿಸಲಾಗಿದ್ದು, ಎಂ.ಓ–30 ರ ಮೇಲೆ ಅಂಟಿಸಿರುವ ಚೀಟಿಯು ಹಾಳಾಗಿರುತ್ತದೆ, ಎಂ.ಓ–31, ಎಂ.ಓ–32, ಎಂ.ಓ–33 ರ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ–31(ಸಿ), 32(ಸಿ) ಮತ್ತು 33(ಸಿ) ಎಂದು ಗುರುತಿಸಲಾಯಿತು. ಸದರಿ ಬಟ್ಟೆಗಳನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ಜರುಗಿಸಿದ ಪಂಚನಾಮೆಯನ್ನು ಈಗಾಗಲೇ ನಿಪಿ–45 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–45(ಡಿ) ಎಂದು ಗುರುತಿಸಲಾಯಿತು.

14. ಅದೇ ದಿನ ಚಾಸಾ–50 ಮತ್ತು 51 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿತರ ಪತ್ತೆಯ ಕುರಿತು ಸಿಬ್ಬಂದಿಗಳಾದ ಚಾಸಾ–55/ಸಿಹೆಚ್‌ಸಿ–1173 ಮತ್ತು ಸಿಪಿಸಿ–1642/ಚರಣ್, ಸಿಪಿಸಿ–593, ಸಿಪಿಸಿ–954 ರವರನ್ನು ನೇಮಿಸಿ ಕಳುಹಿಸಿಕೊಟ್ಟಿರುತ್ತೇನೆ ಹಾಗೂ ನಾನೂ ಸಹ ಆರೋಪಿಯ ಪತ್ತೆ ಕಾರ್ಯಕ್ಕೆ ಹೋಗಿರುತ್ತೇನೆ.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆಗೆ ಹಾಗೂ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.